ದಿನಾಂಕ 11-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಮುಂದುವರಿದು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-13 | ಚಾಲನ ಪರವಾನಿಗೆ ಪ್ರತಿ |
| ನಿಪಿ-14 | Pendrive |
| ನಿಪಿ-14 ಎ | Certificate |

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೆ.

**ಪಾಟೀ ಸವಾಲು - 2 ನೇ ಎದುರುದಾರರ ಪರ ಡಿಬಿಎಸ್ ವಕೀಲರಿಂದಃ**

Pendrive ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. Pendrive ನೋಡಿದ ತಕ್ಷಣ ಅದರಲ್ಲಿ ಏನು ಇದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. pendrive ನಲ್ಲಿ ಅಪಘಾತದ ಬಗ್ಗೆ ವಿಡಿಯೋ ಇರುತ್ತದೆ . ವಿಡಿಯೋವನ್ನು ವಿನ್ಸೆಂಟ್ ಪೌಲ್ ರವರ ಮನೆಯ ಸಿಸಿಟಿವಿ ಕ್ಯಾಮರಾದಲ್ಲಿ capture ಅಗಿದ್ದನ್ನು ನಾನು pendrive ಗೆ Download ಮಾಡಿ ಹಾಜರುಪಡಿಸಿರುತ್ತೇನೆ . ಸಿಸಿಟಿವಿ ಕ್ಯಾಮರಾದಿಂದ ನನ್ನ ಮೊಬೈಲ್ ಗೆ ಡೌನ್ ಲೋಡ್ ಮಾಡಿಕೊಂಡು ನಂತರ ನನ್ನ ಮೊಬೈಲ್ ನಿಂದ pendrive ಗೆ

ಹಾಕಲಾಗಿದೆ . ನಾನು ಸಲ್ಲಿಸಿರುವ ಸರ್ಟಿಫಿಕೇಟ್ ನಲ್ಲಿ ಈಗ ಹೇಳಿದ ವಿಚಾರವನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ. ವಿನ್ಸೆಂಟ್ ಪೌಲ್ ರವರನ್ನು ಬೇಕಾದರೇ ಸಾಕ್ಷಿದಾರರನ್ನಾಗಿ ಮಾಡುತ್ತೇನೆ.ನಾನು ಹೇಳಿದ ರೀತಿ ಮತ್ತು ಹೇಳವಂತ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತ pendrive ನಲ್ಲಿ ಇರುವ ವಿಡಿಯೋಗೂ, ನಾನು ಹೇಳುವಂತ ಅಪಘಾತಕ್ಕೂ ಮತ್ತು ಗಾಯಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.